KATK900001092024

**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತಿಪಟೂರು**

**ಎಸ್.ಸಿ.ಸಂಖ್ಯೆ: 10007/2024**

**ಪ್ರಮಾಣೀಕರಿಸಿದ ದಿನಾಂಕ: 10.10.2025.**

**ಚಾ.ಸಾ-2**

**ಪ್ರಾ.ಸಾ-2**

| | |
|---|---|
| ಹೆಸರು | ಶಿವಕುಮಾರ್ @ ಮೈಲಾರಯ್ಯ |
| ತಂದೆ ಹೆಸರು | ಲಿಂಗಯ್ಯ |
| ವಯಸ್ಸು | 48 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಡಿ-ಪಾಳ್ಯ ದಂಡಿನಶಿವರ |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು ಹುಟ್ಟಿದಾಗಿನಿಂದ ಡಿ-ಪಾಳ್ಯದಲ್ಲಿ ವಾಸವಿರುತ್ತೇನೆ. ನಾನು ಎಂಟನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ದಿ: 07.10.2023 ರಂದು ನಾನು ಶಿವಮ್ಮನವರ ಅಂಗಡಿಯ ಬಳಿಯಲ್ಲಿ ಬಾಳೇಗೊನೆ ತೆಗೆದುಕೊಂಡು ಸದರಿ

ಬಾಳೇಗೊನೆಯನ್ನು ಶಿವಮ್ಮನವರ ಅಂಗಡಿಯಲ್ಲಿ ಕೊಟ್ಟು ಕೆಮಿಕಲ್ ಸ್ಪ್ರೇ ಮಾಡಲು ತಿಳಿಸಿರುತ್ತೇನೆ. ಸದರಿ ಶಿವಮ್ಮನವರು ಕೆಮಿಕಲ್ ಕಾಲಿಯಾಗಿರುತ್ತದೆ ಬಾಳೇಗೊನೆಯನ್ನು ಇಟ್ಟುಹೋಗು ನಾನು ಸ್ಪ್ರೇ ಮಾಡಿರುತ್ತೇನೆ, ನಂತರ ಬಂದು ತೆಗೆದುಕೊಂಡು ಹೋಗು ಎಂದು ತಿಳಿಸಿರುತ್ತಾರೆ. ನಾನು ಮರಳಿ ಶಿವಮ್ಮನವರ ಅಂಗಡಿಯ ಬಳಿ 12.20 ಗಂಟೆಗೆ ಹೋದಾಗ ಸದರಿ ಸ್ಥಳದಲ್ಲಿ ನಂದೀಶ, ರಮೇಶ, ವೆಂಕಟಪ್ಪ, ಚಂದ್ರಶೇಕರ ಹಾಗೂ ಸಿದ್ದೇಶ ರವರು ಶಿವಮ್ಮನವರ ಅಂಗಡಿಯ ಬಳಿ ಕುಳಿತಿದ್ದರು. ಸದರಿ ಶಿವಮ್ಮನವರ ಅಂಗಡಿಯ ಎದುರ ನಂದೀಶನ ಬೈಕ್ ನಿಂತಿದ್ದು, ಅದರ ಮೇಲೆ ರೋಟಿ ಕುಡಲು ಇರುತ್ತದೆ. ನಾನು ಶಿವಮ್ಮನನ್ನು ಬಾಳೇಗೊನೆಯನ್ನು ಕೇಳಿದಾಗ, ಅವರು ಒಳಗೆ ಇದೆ ತೆಗೆದುಕೋ ಎಂದು ತಿಳಿಸಿರುತ್ತಾರೆ. ನಾನು ಒಳಗೆ ಹೋಗಿ ಬಾಳೇಗೊನೆಯನ್ನು ತೆಗೆದುಕೊಂಡು ಬಂದ ನಂತರ ನಂದೀಶನನ್ನು ಹಬ್ಬದ ಕೆಲಸ ಆಯಿತ ಎಂದು ಕೇಳಿದೆ, ಅದಕ್ಕೆ ಆತನು ತನ್ನ ಕತ್ತನ್ನು ಅಲ್ಲಾಡಿಸಿರುತ್ತಾನೆ. ನಂತರ ಅಲ್ಲೆ ಇದ್ದ ರಮೇಶ ಇವರು ನನ್ನನ್ನು ನೋಡಿ ನಕ್ಕಿರುತ್ತಾರೆ. ನಾನು ಮುಂದೆ ಹತ್ತು ಹೆಜ್ಜೆ ಹೋದ ನಂತರ ನಂದೀಶ ಈತನು ರೋಟಿ ಕುಡಲಿನಿಂದ ಶಿವಮ್ಮರವರ ಎಡಭಾಗದ ಕೆನ್ನೆಗೆ ಹಲ್ಲೆ ಮಾಡಿರುತ್ತಾನೆ. ಸದರಿ ಶಿವಮ್ಮನವರು ಕಿರಚಿಕೊಂಡಾಗ ಅಲ್ಲೇ ಇದ್ದ ಅವರು ಗಲಾಟೆಯನ್ನು ಬಿಡಿಸಲು ಪ್ರಯತ್ನಿಸಿರುತ್ತಾರೆ, ನಾನು ಸಹಃ ಮರಳಿ ವಾಪಸ್ಸು ಬಿಡಿಸಿಕೊಳ್ಳಲು ಬಂದಿರುತ್ತೇನೆ. ಆಗ ನಂದೀಶ ಈತನು ನನ್ನನ್ನು, ರಮೇಶ, ಚಂದ್ರಶೇಕರ ಹಾಗೂ ಸಿದ್ದೇಶರವರನ್ನು ರೋಟಿ ಕುಡಲಿನಿಂದ ಹೆದರಿಸಿರುತ್ತಾನೆ. ಅಂಗಡಿಯಲ್ಲಿ ಇದ್ದ ಚೂರಿಯಿಂದ ಮೂರು ನಾಲ್ಕು ಬಾರಿ ಶಿವಮ್ಮನವರನ್ನು ಎಡಗಡೆಯಿಂದ ಕುತ್ತಿಗೆಯ ವರೆಗೂ ಇರಿದಿರುತ್ತಾರೆ. ಶಿವಮ್ಮನವರು ಜ್ಞಾನ ತಪ್ಪಿ ಕೆಳಗೆ

ಬಿದ್ದಿರುತ್ತಾರೆ, ಆಗ ಸಮಯ 12.30 ಗಂಟೆಯಾಗಿರುತ್ತದೆ. ನಂತರ ನಂದೀಶ ಈತನು ಪಕ್ಕದ ಅಂಗಡಿ ಬಳಿ ಹೋಗಿ ರೋಟಿ ಕುಡಲನ್ನು ಬಿಸಾಕಿರುತ್ತಾನೆ. ನಂತರ ನಾವುಗಳು ಶಿವಮ್ಮನವರ ಬಳಿ ಹೋಗಿ ನೀರನ್ನು ಹಾಕಿ ಎಬ್ಬಿಸಲು ಪ್ರಯತ್ನಿಸಿರುತ್ತೇವೆ. ಸದರಿ ನಂದೀಶ ಈತನು ಮತ್ತೇ ಚೂರಿಯನ್ನು ಹಿಡಿದುಕೊಂಡು ಬಂದು ಬೈಕಿನಲ್ಲಿ ದಂಡಿನಶಿವರ ಪೋಲಿಸ್ ಠಾಣೆಗೆ ಹೊಗಿ ಶರಣಾಗುತ್ತೇನೆ ಎಂದು ತಿಳಿಸಿ, ಸಂಪಿಗೆ ಹೊಸಹಳ್ಳಿ ರಸ್ತೆ ಕಡೆಗೆ ಹೋಗಿರುತ್ತಾರೆ. ಸದರಿ ಶಿವಮ್ಮನವರು ರಕ್ತಸ್ರಾವವಾಗಿದ್ದು, ನಾವು ನೀರು ಚುಮಕಿಸಿ ಎಚ್ಚರಿಸಿದಾಗ, ಎಚ್ಚರವಾಗಿರುವುದಿಲ್ಲ. ಅವರು ಸ್ಥಳದಲ್ಲೇ ಮೃತಪಟ್ಟಿದ್ದರು. ಶಿವಮ್ಮನವರ ಬಳಿ ಮೂರು ಅಂಗಡಿಗಳಿದ್ದು, ಎರಡು ಅಂಗಡಿಗಳನ್ನು ಬಾಡಿಗೆಗೆ ನೀಡಿ, ಒಂದು ಅಂಗಡಿಯಲ್ಲಿ ಚಿಲ್ಲರೆ ವ್ಯಾಪಾರ ಮಾಡುತ್ತಿದ್ದರು. ಸದರಿ ನಂದೀಶ ಈತನು ಪಕ್ಕದಲ್ಲಿಯೇ ಅಂಗಡಿಯನ್ನು ಇಟ್ಟುಕೊಂಡು ಆತನು ಆರು ತಿಂಗಳಿನಿಂದ ಬಾಗಿಲು ಹಾಕಿದ್ದನು ಹಾಗೂ ನಂದೀಶ ಈತನು ಶಿವಮ್ಮನವರು ಅಂಗಡಿ ಇಟ್ಟಿದ್ದರಿಂದ ನನಗೆ ವ್ಯಾಪಾರ ಆಗುತ್ತಿಲ್ಲ ಎಂದು ನನಗೆ ಹೇಳಿಕೊಳ್ಳುತ್ತಿದ್ದನು. ಸದರಿ ನಂದೀಶ ಈತನಿಗೆ ವಾಪಾರ ಆಗದಂತೆ ಮಾಟ ಮಾಡಿಸಿರುತ್ತಾರೆ ಎಂದು ತಿಳಿದುಕೊಂಡು ನಂದೀಶ ಈತನು ಅದೇ ದ್ವೇಷದಿಂದ ಕೊಲೆ ಮಾಡಿರುತ್ತಾನೆ. ಸದರಿ ನಂದೀಶ ಈತನು ಶಿವಮ್ಮನವರ ಅಂಗಡಿಯಲ್ಲಿ ಸಾಮಾನುಗಳನ್ನು ತೆಗೆದುಕೊಂಡು ಸರಿಯಾಗಿ ಹಣ ನೀಡುತ್ತಿಲ್ಲ ಎಂದು ಶಿವಮ್ಮ ನನಗೆ ತಿಳಿಸಿದ್ದರು. ನಾನು ಘಟನೆಯನ್ನು ನೋಡಿದ್ದು, ನಂತರ ಶಿವಮ್ಮನವರ ಮಗ ರಾಜುರವರಿಗೆ 1.00 ಗಂಟೆಗೆ ಕರೆ ಮಾಡಿರುತ್ತೇನೆ. ಸದರಿ ರಾಜುರವರು ಕರೆಯನ್ನು ಸ್ವೀಕರಿಸಿರುವುದಿಲ್ಲ. ನಂತರ ರಾಜುರವರೇ ಮರಳಿ ಕರೆ ಮಾಡಿರುತ್ತಾರೆ. ಸದರಿ ಕರೆ ಬಂದಾಗ ರಾಜುರವರಿಗೆ

ನಂದೀಶ ನಿಮ್ಮ ತಾಯಿಯನ್ನು ಕೊಲೆ ಮಾಡಿರುತ್ತಾನೆ ಎಂದು ತಿಳಿಸಿರುತ್ತೇವೆ. ನಂತರ ರಾಜುರವರು 2.30 ಗಂಟೆಗೆ ಬಂದಿರುತ್ತಾರೆ.

ದಿಃ 07.10.2023 ರಂದು ಪೋಲಿಸರು ನನಗೆ 4.00 ಗಂಟೆಗೆ ನೋಟಿಸ್ ಅನ್ನು ನೀಡಿ ಠಾಣೆಗೆ ಬರಲು ತಿಳಿಸಿರುತ್ತಾರೆ. ನಾನು ಹಾಗೂ ಕಾರ್ತಿಕ್ ರವರು ದಂಡಿನಶಿವರ ಪೋಲಿಸ್ ಠಾಣೆಗೆ 5.00–5.15 ಗಂಟೆಗೆ ಹೋಗಿರುತ್ತೇವೆ, ಸದರಿ ಠಾಣೆಯಲ್ಲಿ ನಂದೀಶ ಸಹಃ ಇದ್ದನು. ನಂತರ ನಂದೀಶ ಈತನು ಠಾಣೆಯಲ್ಲಿ ನಾನೇ ಕೊಲೆ ಮಾಡಿರುವುದಾಗ ಸಬ್ ಇನ್ಸ್ ಪೆಕ್ಟರ್ ಬಳಿ ತಿಳಿಸಿ, ಕುಡುಗೋಲು ಹಾಗೂ ಚೂರಿಯನ್ನು ತೋರಿಸುವುದಾಗಿ ಹೇಳಿರುತ್ತಾನೆ. ನಂತರ ನಂದೀಶ ಈತನು ನಮ್ಮನ್ನು ಕರೆದುಕೊಂಡು ಸಂಪಿಗೆ ಹೊಸಹಳ್ಳಿ ಬಳಿ ಸಿದ್ದಲಿಂಗಶೆಟ್ಟಿ ತೋಟದಲ್ಲಿ ಅಣೆ ಇದ್ದು, ಅದರ ಪಕ್ಕದಲ್ಲಿ ಇದ್ದ ಹುಲ್ಲಿನಿ ಪೋದೆಯಿಂದ ಚೂರಿಯನ್ನು ತೆಗೆದುಕೊಟ್ಟಿರುತ್ತಾನೆ. ನಾನು ಸದರಿ ನಂದೀಶ ಈತನು ಚೂರಿಯನ್ನು ಎತ್ತಿಕೊಡುವುದನ್ನು ನೋಡಿರುತ್ತೇನೆ, ಚೂರಿಗೆ ರಕ್ತವಾಗಿರುತ್ತದೆ. ಅದನ್ನು ಬಟ್ಟೆಯಿಂದ ಹಿಡಿದುಕೊಂಡು ಬಿಳಿ ಬಟ್ಟೆಯಲ್ಲಿ ಹಾಕಿ ಹೆಚ್ ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತಾರೆ. ಸದರಿ ಸ್ಥಳದಲ್ಲಿ ಪೋಟೊಗಳನ್ನು ತೆಗೆದು ಸಹಿ ಪಡೆದುಕೊಂಡಿರುತ್ತಾರೆ ಹಾಗುಾ ಮಹಜರ್ ಅನ್ನು ಜರುಗಿಸಿರುತ್ತಾರೆ. ಸದರಿ ಮಹಜರ್ ಗೆ ನಾನು, ಕಾರ್ತಿಕ್ ಹಾಗೂ ನಂದೀಶ ರವರು ಸಹಿ ಮಾಡಿರುತ್ತೇವೆ. ಸದರಿ ಮಹಜರ್ ಅನ್ನು ಸಂಜೆ 6.15–6.45 ಗಂಟೆಯವರೆಗೂ ಮಾಡಿರುತ್ತಾರೆ. ಸದರಿ ಪಂಚನಾಮೆಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿ.ಪಿ–5 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–5(ಎ) ಎಂದು

ಗುರುತಿಸಲಾಯಿತು. ಸಾಕ್ಷಿಯು ಪೋಟೊವನ್ನು ನೋಡಿ ಗುರುತಿಸಿದ್ದು, ಸದರಿ ಪೋಟೊವನ್ನು ನಿ.ಪಿ-6 ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿಕೊಂಡಿರುವ ಚೂರಿಯನ್ನು ನೋಡಿದರೆ ಗುರುತಿಸುತ್ತೇನೆ.

**(ಸರ್ಕಾರಿ ಅಭಿಯೋಜಕರು ಅಮಾನತ್ತು ಪಡಿಸಿಕೊಂಡಿರುವ ವಸ್ತುವನ್ನು ಗುರುತಿಸಲು ಅನುಮತಿ ಕೋರಿದ್ದು, ಸದರಿ ಅಮಾನತ್ತು ಪಡಿಸಿಕೊಂಡ ವಸ್ತು ಬಿಳಿ ಬಟ್ಟೆ ಚೀಲದಲ್ಲಿ ಸೀಲ್ ಆಗಿದ್ದು, ಅದನ್ನು ತೆರೆದ ನ್ಯಾಯಾಲಯದಲ್ಲಿ ಅದನ್ನು ತೆರೆದು ಸಾಕ್ಷಿಗೆ ತೋರಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

ಸಾಕ್ಷಿಯು ಸದರಿ ಚೂರಿಯನ್ನು ನೋಡಿ ಗುರುತಿಸಿದ್ದು, ಅದನ್ನು **ಮುದ್ದೆಮಾಲು-7** ಎಂದು ಗುರುತಿಸಲಾಯಿತು.

ಸದರಿ ಮುದ್ದೆಮಾಲು-7 ರ ಮೇಲೆ ಅಂಟಿಸಿರುವ ಚೀಟಿಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ದಿಃ 07.10.2023 ರಂದು ರಾತ್ರಿ 6.50-7.30 ಗಂಟೆಯವರೆಗೂ ನಂದೀಶ ಈತನು ರೋಟಿ ಕುಡಲನ್ನು ಬಿಸಾಕಿದ್ದ ಸ್ಥಳವಾದ ಡಿ-ಪಾಳ್ಯದ ಶ್ರೀನಿವಾಸ ರವರ ಪೆಟ್ಟಿಗೆ ಅಂಗಡಿಯ ಬಳಿ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಪೆಟ್ಟಿಗೆ ಅಂಗಡಿಯ ಪಕ್ಕದಲ್ಲಿ ಬಿದ್ದಿದ್ದ ರೋಟಿ ಕುಡಲನ್ನು ನಂದೀಶ ಈತನು ತೆಗೆದುಕೊಟ್ಟಿರುತ್ತಾನೆ. ಸದರಿ ರೋಟಿ ಕುಡ್ಲಿಗೆ ರಕ್ತವಾಗಿರುತ್ತದೆ. ಸದರಿ ರೊಟಿ ಕುಡ್ಲನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಹೆಚ್ ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತಾರೆ. ಸದರಿ ಸ್ಥಳದಲ್ಲಿ ಪೋಟೊವನ್ನು ತೆಗೆದಿರುತ್ತಾರೆ ಹಾಗೂ ಮಹಜರ್ ಗೆ ಸಹಿ ಪಡೆದಿರುತ್ತಾರೆ. ಸದರಿ ಮಹಜರ್ ಗೆ ನಾನು ಕಾರ್ತಿಕ್ ಹಾಗೂ ನಂದೀಶ ಸಹಿ ಮಾಡಿರುತ್ತೇವೆ. ಸದರಿ ನಂದೀಶ ಈತನ ಮನೆಯಿಂದ ಕುಡುಗೋಲನ್ನು ತಂದಿದ್ದು,

ಸದರಿ ಸ್ಥಳದಲ್ಲಿ ಮಹಜರ್ ಅನ್ನು ಜರುಗಿಸಲು ಆತನನ್ನು ಆತನ ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಮಹಜರ್ ಅಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ–7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–7(ಎ) ಎಂದು ಗುರುತಿಸಲಾಯಿತು. ಸದರಿ ಪೋಟೊವನ್ನು ನೋಡಿ ಗುರುತಿಸಿದ್ದು, ಸದರಿ ಪೋಟೋವನ್ನು ನಿ.ಪಿ–8 ಎಂದು ಗುರುತಿಸಲಾಯಿತು. ಸದರಿ ರೋಟಿ ಕುಡ್ಲನ್ನು ನೋಡಿದರೆ ಗುರುತಿಸುತ್ತೇನೆ.

**(ಸರ್ಕಾರಿ ಅಭಿಯೋಜಕರು ಅಮಾನತ್ತು ಪಡಿಸಿಕೊಂಡಿರುವ ವಸ್ತುವನ್ನು ಗುರುತಿಸಲು ಅನುಮತಿ ಕೋರಿದ್ದು, ಸದರಿ ಅಮಾನತ್ತು ಪಡಿಸಿಕೊಂಡ ವಸ್ತು ಬಿಳಿ ಬಟ್ಟೆ ಚೀಲದಲ್ಲಿ ಸೀಲ್ ಆಗಿದ್ದು, ಅದನ್ನು ತೆರೆದ ನ್ಯಾಯಾಲಯದಲ್ಲಿ ಅದನ್ನು ತೆರೆದು ಸಾಕ್ಷಿಗೆ ತೋರಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

ಸಾಕ್ಷಿಯು ಸದರಿ ರೋಟಿ ಕುಡ್ಲನ್ನು ನೋಡಿ ಗುರುತಿಸಿದ್ದು, ಅದನ್ನು **ಮುದ್ದೆಮಾಲು–8** ಎಂದು ಗುರುತಿಸಲಾಯಿತು.

ಸದರಿ ಮುದ್ದೆಮಾಲು–8 ಮೇಲೆ ಅಂಟಿರುವ ಚೀಟಿಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಘಟನೆಯ ಬಗ್ಗೆ ದಿಃ 08.10.2023 ರಂದು ಪೋಲಿಸ್ ಠಾಣೆಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ದಿಃ 12.10.2023 ರಂದು ತುರುವೇಕೆರೆ ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಗೆ ನಾನು ಸಹಿ ಮಾಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಹೇಳಿಕೆಯನ್ನು ನಿ.ಪಿ–9 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು ನಿ.ಪಿ–9(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ನಂದೀಶನ ಬೈಕನ್ನು ನೋಡಿದರೆ

ಗುರುತಿಸುತ್ತೇನೆ. ಸದರಿ ನಂದೀಶ ಈತನನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ವಿ.ಸಿ ಮುಖಾಂತರ ಹಾಜರಿರುವ ನಂದೀಶ ಈತನನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿಯು ಸದರಿ ಬಜಾಜ್ ಡಿಸ್ಕೋವರಿ ಬೈಕನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಬೈಕನ್ನು **ಮುದ್ದೆಮಾಲು-9** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ.ಎಸ್.ವಿ.ಎಸ್ ವಕೀಲರಿಂದಃ**

ನಾನು ಮೃತ ಶಿವಮ್ಮನವರ ಮಗ ರಾಜುರವರಿಗೆ ಕರೆ ಮಾಡಿದ್ದು, ಅವರು ಕರೆ ಸ್ವೀಕರಿಸಿದ ನಂತರ ನನಗೆ ಅವರು ಕರೆ ಮಾಡಿದ್ದು, ಒಟ್ಟು 5 ನಿಮಿಷಗಳ ಕಾಲ ತೆಗೆದುಕೊಂಡಿರುತ್ತದೆ. ನಾನು ನಿಖರವಾಗಿ ಸಮಯವನ್ನು ನೋಡಿ ಕರೆ ಮಾಡಿರುವುದಿಲ್ಲ, ಅಂದಾಜಿನ ಮೇಲೆ ಸಮಯವನ್ನು ಹೇಳುತ್ತಿದ್ದೇನೆ. ಸದರಿ ಶಿವಮ್ಮನವರು ಎರಡು ಅಂಗಡಿಗಳನ್ನು ಬಾಡಿಗೆಗೆ ನೀಡಿ, ಒಂದು ಬೇಕರಿಗೆ ಹಾಗೂ ಗ್ರಾಮ-1 ಕ್ಕೆ ನೀಡಿರುತ್ತಾರೆ. ಸದರಿ ಗ್ರಾಮ-1 ಕಛೇರಿಯಲ್ಲಿ ಆಧಾರ್ ಕಾರ್ಡ್, ರೇಶನ್ ಕಾರ್ಡ್ ಹಾಗೂ ಎಲೆಕ್ಷನ್ ಕಾರ್ಡ್ ಮಾಡುವ ಕೆಲಸ ಮಾಡುತ್ತಾರೆ ಎಂದರೆ ಸರಿ. ಸದರಿ ಗ್ರಾಮ-1 ರಲ್ಲಿ ದಿನನಿತ್ಯಕ್ಕೆ ಬೇಕಾಗುವಂತೆ ದಾಖಲಾತಿಗಳನ್ನು ಮಾಡುತ್ತಾರೆ ಎಂದರೆ ಸರಿ. ಸದರಿ ಗ್ರಾಮ-1 ರಲ್ಲಿ ಸಾಮಾನ್ಯವಾಗಿ ಜನಸಂದಣಿ ಇರುತ್ತದೆ ಎಂದರೆ ಸರಿ. ಸದರಿ ಬೇಕರಿಯಲ್ಲೂ ಸಹ ಎಲ್ಲಾರು ತಿಂಡಿಯನ್ನು ಕೊಳ್ಳಲು ಓಡಾಡುತ್ತಿರುತ್ತಾರೆ ಎಂದರೆ ಸರಿ. ಸದರಿ ಬೇಕರಿ ಹಾಗೂ ಗ್ರಾಮ-1 ಅಕ್ಕಪಕ್ಕದಲ್ಲಿ ಇರುತ್ತದೆ. ನಾನು ದಿನನಿತ್ಯ ಶಿವಮ್ಮನವರ ಅಂಗಡಿಗೆ ಆಗಾಗ ಹೋಗುತ್ತಿದ್ದು, ಹಾಗೂ ಅವರ ಮನೆಯ ಪಕ್ಕದಲ್ಲಿ ಇರುವ ಕಾರಣ ಅವರ ವಿಶ್ವಾಸ ಇರುತ್ತದೆ ಎಂದರೆ ಸರಿ. ಶಿವಮ್ಮನವರು

ಮಧ್ಯಪಾನ ಮಾರಾಟ ಮಾಡುವ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಶಿವಮ್ಮನವರು ಚಿಲ್ಲರೆ ಅಂಗಡಿ ನಡೆಸುತ್ತಿರಲಿಲ್ಲ ಸದರಿ ಅಂಗಡಿಯಲ್ಲಿ ಮಧ್ಯಪಾನ ಮಾರಾಟ ಮಾಡುತ್ತಿದ್ದ ಕಾರಣ ಸದರಿ ಅಂಗಡಿಗೆ ಸಾಕಷ್ಟು ಜನ ಬರುತ್ತಿದ್ದರು ಹಾಗೂ ಸಾಲದಲ್ಲಿ ಮಧ್ಯಪಾನ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಶಿವಮ್ಮನವರ ಅಂಗಡಿಯಲ್ಲಿ ದಿನಸಿ ಹಾಗೂ ಟೀ ವ್ಯಾಪಾರ ಮಾಡುತ್ತಿದ್ದರು. ನಾನು ಶಿವಮ್ಮನವರ ಅಂಗಡಿಯಲ್ಲಿ ಬೇಕಾದಾಗ ದಿನಸಿ ಖರೀದಿ ಮಾಡುತ್ತಿದ್ದೆನು. ನಾನು ಬಾಳೇ ಗೊನೆಯನ್ನು ಶಿವಮ್ಮನವರ ಅಂಗಡಿಯ ಒಳಗೆ ಇಟ್ಟಿದ್ದು, ಒಳಗೆ ಹೋಗಿ ಗೋಡೆಯ ಪಕ್ಕದಲ್ಲಿ ಇದ್ದ ಬಾಳೇಗೊನೆಯನ್ನು ತಂದಿರುತ್ತೇನೆ. ಶಿವಮ್ಮನವರು ಬಾಳೇಗೊನೆಯನ್ನು ತೆಗೆದುಕೊಳ್ಳಲು ತಿಳಿಸಿರುತ್ತಾರೆ ಅವರು ಅಂಗಡಿಯ ಬಳಿ ಕುಳಿತ್ತಿದ್ದರು. ನಾನು ಬಾಳೇ ಗೊನೆಯನ್ನು ತೆಗೆದುಕೊಂಡು ಅವರೊಂದಿಗೆ ಮಾತನಾಡಿಕೊಂಡು ನಾನು ಅಂಗಡಿಯಿಂದ ಹತ್ತು ಹೆಜ್ಜೆ ಮುಂದೆ ಹೋಗಿದ್ದೆನು. ಸದರಿ ಶಿವಮ್ಮನವರು ಮೊದಲು ಕಿರುಚಿರುತ್ತಾರೆ, ನಂತರ ಹುಡುಗರು ಕಿರುಚಿರುತ್ತಾರೆ. ನಾನು ಹೊಡೆದಿದ್ದನ್ನು ನೋಡಿರುತ್ತೇನೆ. ನಾನು ಹತ್ತು ಹೆಜ್ಜೆಯಿಂದ ಹಿಂತಿರುಗಿ ನೋಡುವಷ್ಟರಲ್ಲಿ ಶಿವಮ್ಮನವರಿಗೆ ಏಟು ಆಗಿತ್ತು. ನಾನು ಹಿಂತಿರುಗಿ ನೋಡಿದಾಗ ಶಿವಮ್ಮನವರ ಹತ್ತಿರ ನಂದೀಶ ಇದ್ದನು, ಬೇರೆ ಯಾರು ಇರಲಿಲ್ಲ. ಸದರಿ ನಂದೀಶ ಈತನು ಯಾವ ಬಣ್ಣದ ಬಟ್ಟೆಯನ್ನು ಧರಿಸಿದ್ದನು ಎಂದು ನನಗೆ ತಿಳಿದಿರುವುದಿಲ್ಲ. ನಂದೀಶ ರವರು ಧರಿಸಿದ ಬಟ್ಟೆಗೆ ರಕ್ತವಾಗಿರುವುದನ್ನು ನಾನು ನೋಡಿರುತ್ತೇನೆ. ಸದರಿ ಬಟ್ಟೆಯ ಮೇಲೆ ರಕ್ತ ಚಿಮ್ಮಿರುತ್ತದೆ. ನಾನು ಸದರಿ ವಿಷಯದ ಬಗ್ಗೆ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ವೆಂಕಟಪ್ಪ ಹಾಗೂ ರಮೇಶ ರವರು ನಮ್ಮ ಊರಿನವರು ನಾನು

ಹಾಗೂ ವೆಂಕಟಪ್ಪ ಹಾಗೂ ರಮೇಶ ರವರು ಶಿವಮ್ಮನವರೊಂದಿಗೆ ವಿಶ್ವಾಸದಿಂದ ಇದ್ದೆವು. ಸದರಿ ಸಿದ್ದೇಶ, ಚಂದ್ರಶೇಕರವರು ಡಿ–ಪಾಳ್ಯದ ವಾಸಿ ಇರುತ್ತಾರೆ. ಸದರಿ ವೆಂಕಟಪ್ಪ ನವರು ಶಿವಮ್ಮನವರು ಅಂಗಡಿಯಲ್ಲಿ ಬೇಕರಿ ಇಟ್ಟಿರುತ್ತಾರೆ. ವೆಂಕಟಪ್ಪನವರು ಹಾಗೂ ಶಿವಮ್ಮನವರು ವಿಶ್ವಾಸದಿಂದ ಇದ್ದರು ಎಂದರೆ ಸರಿ. ನನ್ನ ಬಳಿ ಮೊಬೈಲ್ ಇದ್ದು, ಅದನ್ನು ಬಳಸುತ್ತಿದ್ದೇನೆ, ಆಗ ನನ್ನ ಬಳಿ ಲಾವಾ ಕಂಪನಿಯ ಕೀ–ಪ್ಯಾಡ್ ಮೊಬೈಲ್ ಇರುತ್ತದೆ. ನನಗೆ ಪೋಲಿಸರಿಗೆ ಘಟನೆಯ ಬಗ್ಗೆ ತಿಳಿಸಲು ಯಾವುದೇ ತೊಂದರೆ ಇರಲಿಲ್ಲ. ನಾನು ಚಂದ್ರಶೇಕರ್ ರವರಿಗೆ ವಿಷಯವನ್ನು ತಿಳಿಸಿ, ಪೋಲಿಸರಿಗೆ ವಿಷಯವನ್ನು ತಿಳಿಸಿರುತ್ತೇನೆ. ನಂತರ ನಾನು ರಾಜು ರವರಿಗೆ ಕರೆ ಮಾಡಿರುತ್ತೇನೆ. ಸದರಿ ಚಂದ್ರಶೇಕರರವರು ಸಂಪಿಗೆ ಹೊಸಹಳ್ಳಿಯಲ್ಲಿ ಇದ್ದರು. ನಾನು ಘಟನೆ ನಡೆದ ಐದು ನಿಮಿಷದಲ್ಲಿ ಅವರಿಗೆ ಕರೆ ಮಾಡಿ ವಿಷಯವನ್ನು ತಿಳಿಸಿರುತ್ತೇನೆ. ನಾನು ಚಂದ್ರಶೇಕರರವರಿಗೆ ಕರೆ ಮಾಡಿದಾಗ ಸಮಯವನ್ನು ಗಮನಿಸಿರುವುದಿಲ್ಲ. ಸದರಿ ಅಂಗಡಿಯಿಂದ ಬೈಕ್ ಸುಮಾರು ಹತ್ತು ಅಡಿ ಅಂತರದಲ್ಲಿತ್ತು. ಸದರಿ ಮುದ್ದೆಮಾಲು–7 ಚೂರಿ ಅಂಗಡಿಯ ಟೇಬಲ್ ಮೇಲೆ ಇದ್ದು, ಅದನ್ನು ಬಾಳೇಗೊನೆ ಕೊಯ್ಯಲು ಬಳಸುತ್ತಾರೆ ಎಂದರೆ ಸರಿ. ಅಂಗಡಿಯಲ್ಲಿ ಇದ್ದ ಶೋಕೇಸ್ ಟೇಬಲ್ ಮೇಲೆ ಚೂರಿ ಇತ್ತು. ಸದರಿ ಶೋಕೇಸ್ ಅಲ್ಲಿ ಬಿಸ್ಕೆಟ್ ಹಾಗೂ ಡಬ್ಬಗಳು ಇದ್ದವು. ನಾನು ನಂದೀಶ ಈತನು ಚೂರಿಯನ್ನು ತೆಗೆದುಕೊಂಡಿರುವುದನ್ನು 10–12 ಅಡಿಯ ಅಂತರದಲ್ಲಿ ನೋಡಿರುತ್ತೇನೆ. ನಾನು ನಂದೀಶ ಈತನನ್ನು ಚೂರಿಯನ್ನು ಏಕೆ ತೆಗೆದುಕೊಂಡಿದ್ದೀಯಾ? ಎಂದು ಪ್ರಶ್ನಿಸಿರುವುದಿಲ್ಲ. ಸದರಿ ಅಂಗಡಿಯ ಬಳಿ ಕುಳಿತ್ತಿದ್ದವರು ಏನು ಮಾತನಾಡುತ್ತಿರಲಿಲ್ಲ. ಸದರಿ ಅಂಗಡಿಯ ಬಳಿ ಕುಳಿತ್ತಿದ್ದವರು

ಚಾಕುವನ್ನು ಏಕೆ ತೆಗೆದುಕೊಂಡಿದ್ದೀಯಾ ಎಂದು ಕೇಳಿದ್ದನು ನಾನು ಕೇಳಿಸಿಕೊಂಡಿರುವುದಿಲ್ಲ. ನಾನು ಹಾಗೂ ನನ್ನ ತಮ್ಮ ಗುರುಮೂರ್ತಿ ರವರು ಶಿವಮ್ಮನವರಿಗೆ ನೀರನ್ನು ಬಿಟ್ಟಾಗ ಅವರು ಬಿಕ್ಕಳಿಸಿರುತ್ತಾರೆ. ಸದರಿ ನೀರನ್ನು ನಮ್ಮ ಮನೆಯಿಂದ ಚೊಂಬಿನಲ್ಲಿ ತಂದಿರುತ್ತಾನೆ. ಸದರಿ ವಿಷಯವನ್ನು ಪೋಲಿಸರಿಗೆ ತಿಳಿಸಿರುವುದಿಲ್ಲ. ಸದರಿ ನಂದೀಶ ಈತನು ಬೈಕನ್ನು ಹತ್ತಿ ಹೋಗುವಾಗ ಆತನನ್ನು ತಡೆಯಲು ನಾನು ಹಾಗೂ ಇತರರು ಪ್ರಯತ್ನಿಸಿರುವುದಿಲ್ಲ. ನಾನು ಹಾಗೂ ನಂದೀಶ ಚಿಕ್ಕಂದಿನಿಂದಲೂ ಪರಿಚಯವಿರುತ್ತದೆ. ನನ್ನದು ಸ್ವಂತ ಮನೆ ಇರುತ್ತದೆ. ನಾನು ಶಿವಮ್ಮನವರ ಪಕ್ಕದ ಮನೆಯಲ್ಲಿ ವಾಸವಿದ್ದು, ಶಿವಮ್ಮನವರ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಶಿವಮ್ಮನವರಿಗೆ ಒಬ್ಬ ಮಗ, ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಮಗನಿಗೆ ಮದುವೆಯಾಗಿ 20 ವರ್ಷ ಆಗಿರುತ್ತದೆ. ಆತನು ಬೆಂಗಳೂರಿನಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದಾರೆ. ಸದರಿ ಶಿವಮ್ಮನವರ ಹೆಸರಿನಲ್ಲಿ ಸಾರಾಯಿ ಲೈಸೆನ್ಸ್ ಇತ್ತು ಎಂದರೆ ಸರಿ. ಸದರಿ ನಂದೀಶರವರ ಅಂಗಡಿ ಶಿವಮ್ಮನವರ ಅಂಗಡಿಯಿಂದ 10–12 ಅಡಿ ಅಂತರದಲ್ಲಿರುತ್ತದೆ. ಸದರಿ ನಂದೀಶರವರು ಚಿಲ್ಲರೆ ಅಂಗಡಿಯಲ್ಲಿ ಕಾಫಿ ಟೀ ಹಾಗೂ ದಿನಸಿ ವ್ಯಾಪಾರ ಮಾಡುತ್ತಿದ್ದರು. ಸದರಿ ನಂದೀಶ ಈತನು ಕಳೆದ ನಾಲ್ಕು ವರ್ಷದ ಹಿಂದೆ ಅಂಗಡಿ ಮಾಡಿರುತ್ತಾನೆ. ಸದರಿ ನಂದೀಶ ಈತನು ಸೌಮ್ಯ ಸ್ವಭಾವವಾದ ವ್ಯಕ್ತಿ ಇರುತ್ತಾನೆ ಎಂದರೆ ಸರಿಯಲ್ಲ. ಸದರಿ ನಂದೀಶ ಈತನು ರವಿಕುಮಾರ್ ರವರಿಗೆ ಬಾಟಲ್ ಇಂದ ಹಲ್ಲೆ ಮಾಡಿರುತ್ತಾನೆ. ಅದಕ್ಕೆ ಸಂಬಂಧಿಸಿದಂತೆ ಯಾವುದೇ ಪೋಲಿಸ್ ದೂರು ದಾಖಲಾಗಿರುವುದಿಲ್ಲ. ಸದರಿ ನಂದೀಶ್ ಈತನು ಊರಿನಲ್ಲಿ ಹೆದರಿಸಿ ಬೆದರಿಸಿ ಮಾಡುತ್ತಿದ್ದನು, ಯಾವುದೇ ಗಲಾಟೆ

ಮಾಡಿಕೊಂಡಿರುವುದಿಲ್ಲ. ಸದರಿ ನಂದೀಶ ಈತನಿಗೆ ವ್ಯಾಪಾರವಾಗುತ್ತಿಲ್ಲದ ಕಾರಣ ಶಿವಮ್ಮನವರ ಮೇಲೆ ದ್ವೇಷ ಇದ್ದ ಬಗ್ಗೆ ನಂದೀಶ ಈತನೇ ಹೇಳಿಕೊಂಡಿರುತ್ತಾನೆ, ಯಾವ ದಿನಾಂಕ ಎಂದು ಹೇಳಲು ಬರುವುದಿಲ್ಲ. ಸದರಿ ಶಿವಮ್ಮನವರ ಮಗ ರಾಜುರವರು ಊರಿಗೆ ಸುಮಾರು 2.30 ಗಂಟೆಗೆ ಬಂದಿರುತ್ತಾರೆ. ಸದರಿ ರಾಜುರವರು ಅವರ ಸ್ವಂತ ಕಾರಿನಲ್ಲಿ ಬಂದಿರುತ್ತಾರೆ. ಅವರ ಅಕ್ಕನ ಮಗ ವಾಹನವನ್ನು ಚಲಾಯಿಸಿಕೊಂಡು ಬಂದಿರುತ್ತಾರೆ. ಸದರಿ ಕಾರಿನಲ್ಲಿ ಶಿವಮ್ಮನವರ ಮಗ, ಸೊಸೆ, ಇಬ್ಬರು ಹೆಣ್ಣು ಮಕ್ಕಳು ಹಾಗೂ ಹೆಣ್ಣು ಮಕ್ಕಳ ಮಗ ಬಂದಿರುತ್ತಾರೆ. ಸದರಿ ರಾಜುರವರು ಸ್ಥಳಕ್ಕೆ ಬರುವ ಮುನ್ನ ಪೋಲಿಸರು ಸ್ಥಳಕ್ಕೆ ಬಂದಿದ್ದರು. ಸದರಿ ಪೋಲಿಸರಿಗೆ ರಾಜುರವರೇ ವಿಷಯವನ್ನು ತಿಳಿಸಿರುತ್ತಾರೆ. ಸದರಿ ಪೋಲಿಸರಿಗೆ ಘಟನೆಯ ಬಗ್ಗೆ ವಿಚಾರವನ್ನು ರಾಜುರವರು ತಿಳಿಸಿದ ಬಗ್ಗೆ ರಾಜುರವರು ನನಗೆ ತಿಳಿಸಿರುತ್ತಾರೆ.

ಶಿವಮ್ಮನವರ ಗಂಡನ ಹೆಸರು ಪ್ರಭಯ್ಯ ಇರುತ್ತದೆ. ಅವರಿಗೆ 65 ವರ್ಷಕ್ಕಿಂತ ಹೆಚ್ಚು ವಯ್ಯಸ್ಸಾಗಿರುತ್ತದೆ. ಸದರಿ ಘಟನೆ ನಡೆದ ಸಮಯದಲ್ಲಿ ಪ್ರಭಯ್ಯರವರು ಕಲ್ಲೂರು ಕ್ರಾಸಿಗೆ ಸಾಮಾನು ತರಲು ಹೋಗಿರುತ್ತಾರೆ. ಸದರಿ ಪ್ರಭಯ್ಯನವರು ಕಲ್ಲೂರು ಕ್ರಾಸಿಗೆ ಹೋಗಿರುವ ವಿಷಯವನ್ನು ನನಗೆ ಯಾರು ಹೇಳಿರುವುದಿಲ್ಲ. ನನ್ನ ಹಾಗೂ ಪ್ರಭಯ್ಯನವರ ನಡುವೆ ವಿಶ್ವಾಸ ಚೆನ್ನಾಗಿರುತ್ತದೆ ಎಂದರೆ ಸರಿ. ನಾನು ಸದರಿ ಘಟನೆಯ ಬಗ್ಗೆ ಪ್ರಭಯ್ಯನವರಿಗೆ ತಿಳಿಸಿರುವುದಿಲ್ಲ, ಅವರ ಬಳಿ ಮೊಬೈಲ್ ಇರುವುದಿಲ್ಲ. ಸದರಿ ಪ್ರಭಯ್ಯನವರು ಘಟನೆ ನಡೆದ ಕಾಲು ಗಂಟೆಯ ನಂತರ ಬಂದಿರುತ್ತಾರೆ. ಸದರಿ ಶಿವಮ್ಮನವರ ಮನೆಯಿಂದ ಕಲ್ಲೂರು ಕ್ರಾಸು ಸುಮಾರು 2 ಕಿ.ಮೀ ಅಂತರದಲ್ಲಿರುತ್ತದೆ.

ಸದರಿ ಪ್ರಭಯ್ಯನವರು ಸ್ಥಳಕ್ಕೆ ಬಂದಾಗ ಅವರಿಗೆ ಘಟನೆಯ ಬಗ್ಗೆ ಯಾವುದೇ ವಿಷಯ ತಿಳಿದಿರುವುದಿಲ್ಲ. ಸದರಿ ಪ್ರಭಯ್ಯನವರು ಘಟನಾ ಸ್ಥಳಕ್ಕೆ ಬಂದು ನೋಡಿದ ನಂತರ ಅವರು ಪೋಲಿಸರಿಗೆ ಯಾವುದೇ ವಿಷಯವನ್ನು ತಿಳಿಸಿರುವುದಿಲ್ಲ, ಅವರು ಜಾಸ್ತಿ ಮಾತನಾಡುವುದಿಲ್ಲ. ದಂಡಿನಶಿವರ ಪೋಲಿಸ್ ಠಾಣೆಯವರು ನೋಟಿಸ್ ಅನ್ನು ಖುದ್ದು ನನಗೆ 4.00 ಗಂಟೆಗೆ ಮನೆಯಲ್ಲಿ ನೀಡಿರುತ್ತಾರೆ. ಸದರಿ ನೋಟಿಸ್ ಅನ್ನು ನನಗೆ ನೀಡಿದಾಗ ನಮ್ಮ ಕುಟುಂಬಸ್ಥರು ಮಾತ್ರ ಇದ್ದರು.

**(ಈ ಅಂತದಲ್ಲಿ ನ್ಯಾಯಾಲಯದ ಕಾಲವಕಾಶ ಮುಗಿದಿದ್ದು, ಸಾಕ್ಷಿಯ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.)**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ**

**Sd/-**
**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತಿಪಟೂರು**

**ಮರುಪ್ರಮಾಣೀಕರಿಸಿದ ದಿನಾಂಕಃ 21.11.2025.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ.ಎಸ್.ವಿ.ಎಸ್ ವಕೀಲರಿಂದಃ**

ಸದರಿ ಶಿವಮ್ಮನವರ ಅಂಗಡಿಯ ಶೋಕೇಸಿನಲ್ಲಿ 6-7 ಡಬ್ಬಗಳಿದ್ದು, ಅವು ಗುಂಡಾಕಾರದ ಡಬ್ಬಗಳು ಇರುತ್ತವೆ. ಸದರಿ ಶೋಕೇಸಿನಲ್ಲಿ ಬಿಸ್ಕೆಟ್ ಗಳು ಇದ್ದು, ಎಷ್ಟು ಇರುತ್ತವೆ ಎಂದು ನಿಖರವಾಗಿ ತಿಳಿದಿರುವುದಿಲ್ಲ. ಸದರಿ ಶೋಕೇಸಿನ ಟೇಬಲ್ 4 ½ ಅಡಿ ಉದ್ದ ಎರಡು ಅಡಿ ಅಗಲ ಇರುತ್ತದೆ. ಸದರಿ ಟೇಬಲ್ ಪ್ಲೇವುಡ್ ಟೇಬಲ್ ಇದ್ದು, ಅದಕ್ಕೆ ಗ್ಲಾಸನ್ನು ಅಳವಡಿಸಲಾಗಿರುತ್ತದೆ. ಸದರಿ ಮೃತ ಶಿವಮ್ಮರವರು ಸಾಯುವ ಸಮಯದಲ್ಲಿ ಬಿಕ್ಕಳಿಸಿದಾಗ ನನ್ನ ತಮ್ಮ ಹಾಗೂ ತಮ್ಮನ ಹೆಂಡತಿ ಚೊಂಬಿನಲ್ಲಿ ನೀರು ತಂದಿರುತ್ತಾರೆ, ಸದರಿ ಚೊಂಬನ್ನು ನಾನು ಪೋಲಿಸರಿಗೆ ನೀಡಿರುವುದಿಲ್ಲ. ನಾನು ಶಿವಮ್ಮನವರ ಮಗ ರಾಜುರವರಿಗೆ ಮೂರು ಬಾರಿ ಕರೆ ಮಾಡಿರುತ್ತೇನೆ, ಅವರು ಕರೆಯನ್ನು ಸ್ವೀಕರಿಸಿರುವುದಿಲ್ಲ, ನಂತರ ಅವರೇ ನನಗೆ ಕರೆ ಮಾಡಿರುತ್ತಾರೆ. ಸದರಿ ರಾಜುರವರು ನನಗೆ 1.00 ಗಂಟೆಗೆ ಕರೆ ಮಾಡಿ, ಸುಮಾರು 3 ನಿಮಿಷದ ವರೆಗೂ ಮಾತನಾಡಿರುತ್ತೇವೆ. ಪೋಲಿಸರು ಸದರಿ ಸ್ಥಳದಲ್ಲಿ 2.30 ಗಂಟೆಗೆ ಬಂದಿರುತ್ತಾರೆ. ಸದರಿ ಸ್ಥಳಕ್ಕೆ ಪೋಲಿಸರು ಬಂದು ಘಟನಾ ಸ್ಥಳವನ್ನು ಪರಿಶೀಲಿಸಿ ಮುಗಿಸುವಷ್ಟರಲ್ಲಿ 4.30 ಗಂಟೆಯಾಗಿರುತ್ತದೆ. ಪೋಲಿಸರು ನನ್ನನ್ನು ಠಾಣೆಗೆ ಕರೆದಿದ್ದು, ನಾನು, ರಾಜು ಮತ್ತು ಕಾರ್ತಿಕ್ ರವರು ಖಾಸಗಿ ಕಾರಿನಲ್ಲಿ ಠಾಣೆಗೆ 5.00 ಗಂಟೆಗೆ ಹೋಗಿರುತ್ತೇವೆ. ಸದರಿ ನಾವು ಠಾಣೆಗೆ ಹೋಗಿರುವ ವಾಹನದ ಸಂಖ್ಯೆ ತಿಳಿದಿರುವುದಿಲ್ಲ.

ಸದರಿ ಪೋಲಿಸರು ತಮ್ಮ ಜೀಪಿನಲ್ಲಿ ಹೋಗಿರುತ್ತಾರೆ. ನಾವು ಪೋಲಿಸ್ ಠಾಣೆಗೆ ಹೋದಾಗ ಪೋಲಿಸ್ ಸಬ್ ಇನ್ಸ್ ಪೆಕ್ಟರ್ ಹಾಗೂ ಸಿಬ್ಬಂದಿಗಳು ಇದ್ದರು. ನಾವು ಠಾಣೆಯಲ್ಲಿ ಕಾಲು ಗಂಟೆ ಸಮಯ ಇದ್ದೆವು.

ನಾವು ಠಾಣೆಯ ಹೊರಗೆ ಇದ್ದೆವು. ಸದರಿ ಆರೋಪಿತನು ಪೋಲಿಸ್ ಅಧಿಕಾರಿಗಳಿಗೆ ಚೂರಿಯನ್ನು ತೋರಿಸುತ್ತೇವೆ ಎಂದು ಹೇಳಿದ್ದು, ಅದನ್ನು ನಾವು ಕೇಳಿಸಿಕೊಂಡಿರುತ್ತೇವೆ. ಸದರಿ ಆರೋಪಿ ಠಾಣೆಯ ಬಳಿ ನಮ್ಮಿಂದ 6-7 ಅಡಿ ಅಂತರದಲ್ಲಿದ್ದನು. ಠಾಣೆಯ ಕಿಟಕಿ ಪಶ್ಚಿಮ ದಿಕ್ಕಿಗೆ ಇರುತ್ತದೆ. ನಾವು ಠಾಣೆಯಿಂದ 5.00-5.15 ಗಂಟೆಗೆ ಹೊರಟು, ಸ್ಥಳನ್ನು 6.15 ಗಂಟೆಗೆ ತಲುಪಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ಯಾರು ಇರಲಿಲ್ಲ. ನಾವು ಸ್ಥಳದಲ್ಲಿ 6.45 ಗಂಟೆಯವರೆಗೂ ಇದ್ದೆವು. ಸದರಿ ಸ್ಥಳದ ಚಕ್ ಬಂದಿಗಳನ್ನು ಹೇಳಲು ಬರುತ್ತದೆ. ಸದರಿ ಮಹಜರ್ ಅನ್ನು ಪೋಲಿಸ್ ಸಿಬ್ಬಂದಿ ಬರೆದಿರುತ್ತಾರೆ, ಯಾರು ಎಂದು ತಿಳಿದಿರುವುದಿಲ್ಲ.

ಸದರಿ ಚೂರಿ ಹಿಡಿಕೆಯ ಅಳತೆ ಹಾಗೂ ಚೂರಿಯ ಅಳತೆ ನಿಖರವಾಗಿ ಹೇಳಲು ಬರುವುದಿಲ್ಲ. ಸದರಿ ಪೋಲಿಸರು ಮಹಜರ್ ಕಾಲಕ್ಕೆ ಚೆಕ್ ಬಂದಿಯನ್ನು ಕೇಳಿದ್ದು, ನಾವು ಹೇಳಿರುತ್ತೇವೆ. ಪೋಲಿಸರು ಚಂದ್ರಶೇಕರ್, ವೆಂಕಟಪ್ಪ, ಸಿದ್ದೇಶ್, ನನಗೆ ಹಾಗೂ ನಂದೀಶ್ ರವರನ್ನು ವಿಚಾರಣೆ ಮಾಡಿರುತ್ತಾರೆ. ಪೋಲಿಸರು ಸದರಿ ಅಂಗಡಿಯ ಬಳಿ ಇದ್ದ ಎಲ್ಲಾರನ್ನು ವಿಚಾರಿಸಿರುತ್ತಾರೆ. ಪೋಲಿಸರು ನಮ್ಮ ಐದು ಜನರನ್ನು ಹೊರತುಪಡಿಸಿ ಬೇರೆ ಯಾರನ್ನು ವಿಚಾರಿಸಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಸದರಿ ಮಹಜರ್ ಬರೆದ ಸ್ಥಳದಲ್ಲಿ ಸುಮಾರು ಜನರು ಇದ್ದರು, ಎಷ್ಟು ಜನ ಇದ್ದರು ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಸದರಿ ಅಕ್ಕ ಪಕ್ಕದ ತೋಟದವರು ಬಂದಿರುವುದಿಲ್ಲ. ಸದರಿ ಪೋಲಿಸರು ಅಕ್ಕ ಪಕ್ಕದ ತೋಟದವರನ್ನು ಕರೆದಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ನಾವು ಬಂದಿದ್ದ ವಾಹನದಲ್ಲಿ ರೊಟಿ ಕುಡ್ಲು ಹಾಕಿರುವ ಸ್ಥಳಕ್ಕೆ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ ಅಲ್ಲಿ ಯಾರು ಇರಲಿಲ್ಲ. ಸದರಿ ರೋಟಿ ಕುಡ್ಲು ಬಿದ್ದಿರುವ ಸ್ಥಳದಲ್ಲಿ ಶ್ರೀನಿವಾಸರವರ ತಾಯಿ ಮನೆಯಲ್ಲಿ ಇದ್ದರು, ಅವರು ಹೊರಗೆ ಬಂದಿರುವುದಿಲ್ಲ. ಸದರಿ ಶ್ರೀನಿವಾಸರವರ ತಾಯಿ ಪೋಲಿಸರನ್ನು ನೋಡಿ ಬಾಗಿಲನ್ನು ಹಾಕಿಕೊಂಡಿರುತ್ತಾರೆ. ಸದರಿ

ರೋಟಿ ಕುಡ್ಲು ಬಿದ್ದಿದ್ದ ಮನೆಯ ಅಕ್ಕ ಪಕ್ಕ ಶಿವಮ್ಮನವರ ಮನೆ ಹಾಗೂ ನಮ್ಮ ಮನೆ ಇರುತ್ತದೆ, ಅಲ್ಲಿ ಬೇರೆ ಯಾವುದೇ ಮನೆ ಗಳು ಇರುವುದಿಲ್ಲ. ನಾವು ಸದರಿ ಸ್ಥಳದಲ್ಲಿ 6.50 ರಿಂದ 7.30 ಗಂಟೆಯ ವರೆಗೂ ಇದ್ದೆವು.

ಸದರಿ ಸ್ಥಳಕ್ಕೆ ಚೆಕ್ ಬಂದಿ ಹೇಳಲು ಬರುತ್ತದೆ ಪೂರ್ವಕ್ಕೆ ಕಾಯಿ ಗೋಡಾನ್ ಇರುತ್ತದೆ, ಪಶ್ಚಿಮಕ್ಕೆ ಆರೋಪಿತನ ಅಂಗಡಿ, ಉತ್ತರ-ದಕ್ಷಿಣಕ್ಕೆ ಶಿವಮ್ಮನವರ ಖಾಲಿ ಜಾಗ ಇರುತ್ತದೆ. ಸದರಿ ಪಂಚನಾಮೆಗೆ ನಾನು ಕಾರ್ತಿಕ್ ಹಾಗೂ ನಂದೀಶ್ ಸಹಿ ಮಾಡಿರುತ್ತೇವೆ. ಸದರಿ ಸ್ಥಳದಲ್ಲಿ ಇದ್ದ ಪೆಟ್ಟಿಗೆ ಅಂಗಡಿ ಶ್ರೀನಿವಾಸ ರವರದ್ದು ಇದ್ದು, ಅದು ಮುಚ್ಚಿರುತ್ತದೆ. ಸದರಿ ಪೆಟ್ಟಿಗೆ ಅಂಗಡಿ ಶ್ರೀನಿವಾಸವರದ್ದೆಂದು ದಾಖಲಾತಿ ನೋಡಿರುವುದಿಲ್ಲ ಆದರೆ ಅದು ಅವರ ಮನೆಯ ಮುಂದೆ ಇರುತ್ತದೆ. ಸದರಿ ರೋಟಿ ಕುಡ್ಲು ಪೆಟ್ಟಿ ಅಂಗಡಿಯ ಕೆಳಗೆ ಇರುತ್ತದೆ. ಕುಡುಗೋಲು ಹಾಗೂ ಮಚ್ಚಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ನಾವು ಅಲ್ಲಿಂದ ಎಲ್ಲಿಗೂ ಹೋಗಿರುವುದಿಲ್ಲ. ಸದರಿ ದಂಡಿನಶಿವರ ಪೋಲಿಸರು ಬರಲು ಹೇಳಿದ್ದು, ಅವರ ಹೆಸರು ತಿಳಿದಿರುವುದಿಲ್ಲ. ನಾವು ನ್ಯಾಯಾಲಯಕ್ಕೆ ಹೇಳಿಕೆ ನೀಡಲು ಹೋಗಿರುತ್ತೇವೆ. ದಿಃ 12.10.2023 ರಂದು ಸಂಜೆ 6.00 ಗಂಟೆಗೆ ನ್ಯಾಯಾಲಯಕ್ಕೆ ಹೋಗಿರುತ್ತೇವೆ. ಪೋಲಿಸರು ಮಹಜರ್ ಗೆ ಬಂದಾಗ ತಿಳಿಸಿರುತ್ತಾರೆ. ಪೋಲಿಸರು ನ್ಯಾಯಾಲಯಕ್ಕೆ ಬಂದು ಹೇಳಿಕೆ ನೀಡಲು ನಮಗೆ ನಮ್ಮ ಮನೆಗೆ ಬಂದು ತಿಳಿಸಿರುತ್ತಾರೆ. ನಾನು ನ್ಯಾಯಾಲಯದಲ್ಲಿ ಎರಡು ಸಹಿ ಹಾಗೂ ಮಹಜರ್ ಕಾಲಕ್ಕೆ ಎರಡು ಸಹಿ ಒಟ್ಟು ನಾಲ್ಕು ಸಹಿ ಮಾಡಿರುತ್ತೇನೆ.

ನಾನು ಶಿವಮ್ಮನವರ ಅಂಗಡಿಯಲ್ಲಿ ಔಷದಿ ಸ್ಪ್ರೇ ಮಾಡಲು ಒಂದೇ ಗೊನೆಯನ್ನು ಹಬ್ಬಕ್ಕೆ ಇಟ್ಟಿದ್ದೆನು. ನಾನು ಈ ಮೊದಲು ಹಬ್ಬಗಳಲ್ಲಿ ಹಾಗೂ ಕಾರ್ಯಾಕ್ರಮಗಳಲ್ಲಿ ಮಾತ್ರ ಬಾಳೇ ಗೊನೆಯನ್ನು ಅವರ ಅಂಗಡಿಯಲ್ಲಿ ಇಡುತ್ತಿದ್ದೆನು. ನನ್ನ ಹಾಗೂ ಶಿವಮ್ಮನವರ ಸಂಬಂಧ ಹಾಗೂ ಅವರ ಪರಿವಾರದವರೊಂದಿಗೆ ಚೆನ್ನಾಗಿತ್ತು ಎಂದರೆ ಸರಿ. ಸದರಿ ಶಿವಮ್ಮನವರ ಪರಿವಾರದೊಂದಿಗೆ ನನ್ನ ಸಂಬಂಧ ಚೆನ್ನಾಗಿದ್ದ ಕಾರಣ ನಾನು ಶಿವಮ್ಮನವರ ಮಗ

ರಾಜು ಹಾಗೂ ಪೋಲಿಸರೊಂದಿಗೆ ಸೇರಿ ಆರೋಪಿತನ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕಾರ್ತಿಕ್ ನನಗೆ ಪರಿಚಯಸ್ಥನಾದ ಕಾರಣ ನಾವುಗಳು ಯಾವುದೇ ಮಹಜರ್ ಗೆ ಹೋಗಿಲ್ಲದಿದ್ದರೂ ಸಹಃ ದಾಖಲಾತಿಗಳಿಗೆ ಸಹಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(**ಮರುವಿಚಾರಣೆ ಇಲ್ಲವೆಂದಿದ್ದಾರೆ**).

(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು**).

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ**

(**ಹೇಮಂತ್ ಕುಮಾರ್ ಸಿ.ಆರ್**)
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತಿಪಟೂರು**